**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ: ಸ್ಪೆಷಲ್ ಎನ್.ಡಿ.ಪಿ.ಎಸ್.06/2023**

ಅಸಾ :**01**
ಚಾಸಾ : 02

ಸಾಕ್ಷಿದಾರರ ಹೆಸರು : ಚನ್ನಕೇಶವರ ಉಳ್ಳೀರ

ತಂದೆಯ ಹೆಸರು : ನೀಲಪ್ಪ

ವಯಸ್ಸು : 47 ವರ್ಷ

ಉದ್ಯೋಗ : ಕರವಸೂಲಿಗಾರರು, ಸಿ.ಎಂ.ಸಿ., ಹಾವೇರಿ .

ವಾಸ ಸ್ಥಳ : ಹಾವೇರಿ.

ದಿನಾಂಕ: **13/10/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ಚಾಸಾ-3 ನನ್ನ ಸಹೋದ್ಯೋಗಿ. ಇಂದು ಹಾಜರಿರುವ 2ನೇ ಆರೋಪಿ ನನಗೆ ಗೊತ್ತಿಲ್ಲ.

2. ದಿನಾಂಕ:09/08/2023 ರಂದು ಪೌರಾಯುಕ್ತರು ನನ್ನನ್ನು ಮತ್ತು ಚಾಸಾ-3 ರನ್ನು ಹಾವೇರಿಯ ಪೊಲೀಸರೊಂದಿಗೆ ಕಳಿಸಿದರು. ಪೊಲೀಸರು ನಮ್ಮನ್ನು ಎನ್.ಎಚ್-4 ರ ತೋಟದ ಯಲ್ಲಾಪುರ ಬೈಪಾಸ ಬಳಿ ಕರೆದುಕೊಂಡು ಹೋದರು. ಅಲ್ಲಿ 3 ಜನ ಹಾಜರಿದ್ದರು. ಸದರಿ 3 ಜನ ಅನುಮಾನಸ್ಪದವಾಗಿ ಕುಳಿತಿದ್ದಾರೆ ಎಂದು ತಿಳಿಸಿ, ಪೊಲೀಸರು ಅವರನ್ನು ಹಿಡಿದರು. ಅವರ ಹೆಸರು ಅಜಯ್, ಯಾಶಿನ್ ಮತ್ತು ಶಫಿ ಎಂದು ಗೊತ್ತಾಯಿತು. ಅವರ ಹತ್ತಿರ 2 ಪಲ್ಸರ ಬೈಕುಗಳು, 2 ಓಪ್ಪೋ ಮೊಬೈಲುಗಳು ಇದ್ದವು. ಅಲ್ಲದೇ ಗಾಂಜಾ ಇತ್ತು. ತೂಗಿ ನೋಡಿದಾಗ 1340 ಗ್ರಾಂ ಗಾಂಜಾ ಕಂಡುಬಂತು.

3. ಪೊಲೀಸರು ಸದರಿ ಸ್ವತ್ತುಗಳನ್ನು ಜಪ್ತಿಮಾಡಿ ಪಂಚನಾಮೆ ತಯಾರಿಸಿ ನಮ್ಮ ಸಹಿ ಪಡೆದರು. ಈಗ ತೋರಿಸಿದ ಪಂಚನಾಮೆಯ ಮೇಲೆ ನನ್ನ ಸಹಿಗಳಿದ್ದು, ಪಂಚನಾಮೆಯನ್ನು ಈಗ ನಿಪಿ-1, ನನ್ನ ಒಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆಗ ಜಪ್ತಿ ಮಾಡಲಾದ ಸ್ವತ್ತನ್ನು ಗುರುತಿಸಬಲ್ಲೆ. ಪೊಲೀಸರು ಪಡೆದ ಪೋಟೋಗಳಲ್ಲಿ ಸದರಿ ಸ್ವತ್ತು ಕಂಡು ಬರುತ್ತವೆ. 10 ಪೋಟೋಗಳನ್ನು ನಿಪಿ-2 ರಿಂದ 11 ಎಂದು ಗುರುತಿಸಲಾಯಿತು. ನಿಪಿ-2 ರಿಂದ 11ರಲ್ಲಿ

ಬೈಕುಗಳು, ಪೊಲೀಸರು, ತೂಕದ ಯಂತ್ರ, ನಾವು ಇತ್ಯಾದಿ ಕಂಡುಬರುತ್ತವೆ. ಈ ದಿನ ಹಾಜರಿರುವ ಆರೋಪಿ ಆ ದಿನ ನಾನು ನೋಡಿದ ಯಾಶಿನ್ ಇರುತ್ತಾನೆ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಎಂ.ಎಂ.ಬಿ. ವಕೀಲರಿಂದಃ-**

4. ಆ ದಿನ ಪೊಲೀಸರು ಜಪ್ತಿಮಾಡಿದ ಮೊಬೈಲುಗಳ ಐಎಂಇಐ ನಂಬರ ಗೊತ್ತಿಲ್ಲ. ಸದರಿ ಮೊಬೈಲುಗಳಲ್ಲಿ ಇದ್ದ ಸಿಮ್ ಕಾರ್ಡ ಸಂಖ್ಯೆ ಗೊತ್ತಿಲ್ಲ. ಮೊಬೈಲಗಳ ಮಾಡೆಲ್ ಗೊತ್ತಿಲ್ಲ. ಜಪ್ತಿಮಾಡಲಾದ ಬೈಕುಗಳ ನೋಂದಣಿ ಸಂಖ್ಯೆಃಕೆಎ 27 1988 ಮತ್ತು ಕೆಎ 27 5404 ಇದ್ದವು.

5. ಜಪ್ತಿಕಾಲಕ್ಕೆ ನಾನು, ಇನ್ನೊಬ್ಬ ಪಂಚ, ಪೊಲೀಸರು ಹಾಗೂ ಸಿಕ್ಕಿಬಿದ್ದ 3 ಜನರು ಇದ್ದೆವು. ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ತಯಾರಿಸಿಲ್ಲ ಎನ್ನುವುದು ಸುಳ್ಳು. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

***(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.***)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.